# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಕೆ.ಎ. ತಿಪ್ಪೇಸ್ವಾಮಿ, ಡಾ: ವೈ.ಎ. ನಾರಾಯಣಸ್ವಾಮಿ, ಡಾ: ಕೆ.ಗೋವಿಂದರಾಜ್ ಇವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.**

**ಸೂಚನೆ:**

ಕೋಲಾರ ಜಿಲ್ಲೆಯಲ್ಲಿ ಹಾಲು ಉತ್ಪಾದಿಸುವ ರೈತರಿಗೆ ಹಾಲಿಗೆ ಸರಿಯಾದ ಬೆಲೆ ಸಿಗದಿರುವುದು ಹಾಗೂ ಉತ್ಪಾದನಾ ವೆಚ್ಚವು ಸಹ ಹೆಚ್ಚಾಗಿರುವುದರಿಂದ ರೈತರಿಗೆ ಬಹಳ ಕಷ್ಟಕರವಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಹಾಲು ಉತ್ಪಾದಕರಿಗೆ, ನೀಡಲಾಗುತ್ತಿರುವ ಹಾಲಿನ ದರಕ್ಕೂ, ನಮ್ಮ ರಾಜ್ಯದಲ್ಲಿ ನೀಡಲಾಗುತ್ತಿರುವ ಹಾಲಿನ ದರಕ್ಕೂ ಬಹಳ ಅಂತರವಿದೇ, ಪ್ರತಿ ನಿತ್ಯ ಹಾಲು ಉತ್ಪಾದಿಸುವ ರೈತರಿಗೆ ಲೀಟರಿಗೆ ಕೇವಲ ರೂ.24/- ರೂಪಾಯಿಗಳನ್ನು ನೀಡಿ, ಮಾರಾಟ ದರ ರೂ.42 ರಿಂದ 48 ರೂಪಾಯಿಯನ್ನು ಗ್ರಾಹಕರಿಂದ ಪಡೆಯಲಾಗುತ್ತಿರುವುದು (ಎಲ್ಲರಿಗೂ ತಿಳಿದಿರುವ ವಿಷಯ, ಆದರೆ, ಈ ರೀತಿ ತಾರತಮ್ಯವಾಗಿರುತ್ತದೆ ಏಕೆ? ಈ ವಿಷಯವನ್ನು ರೈತರ ಹಿತದೃಷ್ಟಿಯಿಂದ ನಿಯಮ 330 ರಡಿಯಲ್ಲಿ ಚರ್ಚಿಸುವ ಕುರಿತು ಗಮನ ಸೆಳೆಯಲಾಗಿದೆ.

**ಹೇಳಿಕೆ:**

ಪ್ರಸ್ತುತ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟದಲ್ಲಿ 85000 ಸದಸ್ಯರುಗಳ ಮೂಲಕ ದಿನಂಪ್ರತಿ ಒಟ್ಟಾರೆ 1901 ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಸರಾಸರಿ 9.33 ಲಕ್ಷ ಲೀಟರ್ ಹಾಲನ್ನು ಶೇಖರಿಸಲಾಗುತ್ತಿದೆ. ಸಂಘದಿಂದ ಶೇಖರಿಸಿದ ಹಾಲನ್ನು ಹತ್ತಿರದ ಬಲ್ಕ್ ಮಿಲ್ಕ್‌ಕೂಲರ್ (ಬಿ.ಎಂ.ಸಿ.). ಹಾಲು ಶೀತಲಕೇಂದ್ರ ಮತ್ತು ಡೇರಿಗೆ ಸಾಗಾಣಿಕೆ ಮಾಡಿ ತಂಪುಗೊಳಿಸಲಾಗುತ್ತಿದೆ. ಹಾಗೆಯೇ ತಂಪುಗೊಳಿಸಿದ ಹಾಲನ್ನು ಟ್ಯಾಂಕರ್‌ಗಳ ಮೂಲಕ ಮುಖ್ಯಡೇರಿಗೆ ಸಾಗಾಣಿಕೆ ಮಾಡಿ. ಪ್ಯಾಶ್ಚೀಕರಿಸಿ. ಸ್ಯಾಚೆಟ್‌ಗಳಲ್ಲಿ ಪ್ಯಾಕ್ ಮಾಡಿ. ನಗರ ಪ್ರದೇಶದ ಗ್ರಾಹಕರಿಗೆ ದಿನಂಪ್ರತಿ ಸರಾಸರಿ 3.50 ಲಕ್ಷ ಲೀಟರ್‌ನಷ್ಟು ಹಾಲು ಮತ್ತು ಮೊಸರನ್ನು ಹಾಲಿನ ವಿತರಕರು / ಏಜಂಟ್‌ರಗಳ ಮೂಲಕ ಮಾರಾಟ ಮಾಡಲಾಗುತ್ತಿದೆ. ಹಾಲಿನ ವಿತರಕರು, ಫ್ರಾಂಛೈಸಿ ಔಟ್‌ಲೆಟ್‌ಗಳು ಹಾಗೂ ಪಾರ್ಲರ್‌ಗಳು ಸೇರಿ ಒಟ್ಟು 1283 ಕೇಂದ್ರಗಳ ಮೂಲಕ ಗ್ರಾಹಕರಿಗೆ ಹಾಲು ತಲುಪಿಸುವ ಕಾರ್ಯವನ್ನು ಮಾಡಲಾಗುತ್ತಿದೆ.

**ಹಾಲು ಶೇಖರಣೆ ದರ**

ಪ್ರಸ್ತುತ ಒಕ್ಕೂಟ ಹಾಲು ಉತ್ಪಾದಕರಿಂದ ಸಂಗ್ರಹಿಸುತ್ತಿರುವ ಹಾಲಿನಲ್ಲಿ ಸರಾಸರಿ ಜಿಡ್ಡಿನಾಂಶ ಶೇ.4.1ರಷ್ಟಿದ್ದು. ಪ್ರತಿ ಲೀಟರ್ ಹಾಲಿಗೆ ರೂ.25.08 ದರವನ್ನು ಪಾವತಿಸುತ್ತಿದೆ. ಜೊತೆಗೆ. ರಾಜ್ಯ ಸರ್ಕಾರದ ಕ್ಷೀರಧಾರೆ ಯೋಜನೆಯಡಿ ರೈತರು ಸರಬರಾಜು ಮಾಡಿದ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ

ರೂ.5/-ಪ್ರೋತ್ಸಾಹಧನ ದೊರಕುತ್ತಿದ್ದು, ಒಟ್ಟಾರೆ, ಪ್ರತಿ ಲೀಟರ್ ಹಾಲಿಗೆ ರೂ.30.08 ದರವನ್ನು ಪಾವತಿಸಿದಂತಾಗುತ್ತದೆ. ಇದರ ಜೊತೆಗೆ ಒಕ್ಕೂಟವು ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ರಾಸುಗಳಿಗೆ ವಿವಿಧ ರೀತಿಯ ತಾಂತ್ರಿಕ ಸೌಲಭ್ಯಗಳಾದ ಪಶುವೈದ್ಯಕೀಯ ಸೌಲಭ್ಯ, ರಾಸು ವಿಮಾಸೌಲಭ್ಯ, ಹಸಿರು ಮೇವಿನ ಅಭಿವೃದ್ಧಿ ಕಾರ್ಯಕ್ರಮಗಳು, ಕೌ ರಬ್ಬರ್ ಮ್ಯಾಟ್, ವಿದ್ಯುತ್‌ಚಾಲಿತ ಹಾಲು ಕರೆಯುವ ಯಂತ್ರಗಳು, ಮೇವು ಕತ್ತರಿಸುವ ಯಂತ್ರಗಳು ಹಾಗು ಉತ್ಪಾದಕರ ಸದಸ್ಯರುಗಳಿಗೆ ವಿಮಾ ಸೌಲಭ್ಯವನ್ನು ಒದಗಿಸುತ್ತಿದ್ದು, ಪ್ರತಿ ಲೀಟರ್‌ಗೆ ಸರಾಸರಿ ರೂ.0.85 ವೆಚ್ಚವನ್ನು ಭರಿಸುತ್ತಿದೆ. ಹಾಲಿನ ಸಾಗಾಣಿಕೆ, ಸಂಸ್ಕರಣೆ, ವಿತರಣೆ ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 8.29 ಮೊತ್ತವನ್ನು ಭರಿಸುತ್ತಿದೆ. ಹಾಲು ಮಾರಾಟದಾರರು ಮಾರಾಟ ಮಾಡಿದ ಪ್ರತಿ ಲೀಟರ್ ಹಾಲಿಗೆ ಮಾರ್ಜಿನ್ ದರ/ ಏಜೆಂಟ್ ಕಮಿಷನ್ ದರ ರೂ. 1.85 ಅನ್ನು ಪಾವತಿಸುತ್ತಿದೆ. ಒಟ್ಟಾರೆ, ಪ್ರತಿ ಲೀಟರ್ ಹಾಲಿಗಾಗಿ ಒಕ್ಕೂಟ ರೂ.36.07 ಮೊತ್ತವನ್ನು ಭರಿಸುತ್ತಿದೆ.ಮಾರುಕಟ್ಟೆಯಲ್ಲಿ ಪ್ರತಿ ಲೀಟರ್‌ಟೋನ್ಡ್ ಹಾಲನ್ನು ಪ್ರಸ್ತುತ ರೂ.37.00 ರಂತೆ ಮಾರಾಟ ಮಾಡಲಾಗುತ್ತಿದ್ದು, ಉಳಿಕೆ ವ್ಯತ್ಯಾಸದ ಮೊತ್ತ ರೂ.0.93 ಅನ್ನು ಒಕ್ಕೂಟ ಮೂಲಭೂತ ಅಭಿವೃದ್ಧಿ ಸೌಕರ್ಯದಡಿ ಮಾಡಿರುವಂಥ ಸಾಲದ ಮರುಪಾವತಿ ಹಾಗೂ ಸವಕಳಿ ವೆಚ್ಚಕ್ಕಾಗಿ ಬಳಸಿಕೊಳ್ಳುತ್ತಿದೆ.

ಮಾರುಕಟ್ಟೆಯಲ್ಲಿ ಇದೀಗ ಲಭ್ಯವಿರುವ ವಿವಿಧ ಖಾಸಗಿ ಹಾಲಿನ ಬ್ರಾಂಡ್‌ಗಳ ಮಾರಾಟ ದರ ಮತ್ತು ಏಜೆಂಟ್‌ಗಳಿಗೆ ನೀಡಲಾಗುತ್ತಿರುವ ಕಮಿಷನ್ ದರದ ವಿವರಗಳು ಈ ಕೆಳಕಂಡಂತಿದೆ.

**ಖಾಸಗಿ ಡೇರಿಯವರೊಂದಿಗೆ ಹಾಲು ಮಾರಾಟದರದ ಹೋಲಿಕೆ:**

| ಕ್ರ.ಸಂ. | ಹಾಲಿನ ವಿವಿಧಬ್ರ್ಯಾಂಡ್‌ಗಳು | ಪ್ರತಿ ಲೀಟರ್‌ಟೋನ್ಡ್‌ಹಾಲಿಗೆ (ದರ: ರೂ.ಗಳಲ್ಲಿ) | | |
|---|---|---|---|---|
| | | ಬಿಲ್ಲಿಂಗ್‌ದರ | ಮಾರ್ಜಿನ್‌ದರ(ಏಜೆಂಟ್‌ಕಮೀಷನ್) | ಗರಿಷ್ಠ ಮಾರಾಟದರ |
| 1 | ನಂದಿನಿ | 35.15 | 1.85 | 37.00 |
| 2 | ದೊಡ್ಲಾ | 36.50 | 5.50 | 42.00 |
| 3 | ಹೆರಿಟೇಜ್ | 37.50 | 6.50 | 44.00 |
| 4 | ತಿರುಮಲ | 38.50 | 7.50 | 46.00 |
| 5 | ಜೆರ್ಸಿ | 37.50 | 6.50 | 44.00 |
| 6 | ಗೋವರ್ಧನ್ | 37.50 | 6.50 | 44.00 |
| 7 | ವಲ್ಲಭ | 38.00 | 12.00 | 50.00 |

ಒಕ್ಕೂಟದ ಆರ್ಥಿಕ ಪರಿಸ್ಥಿತಿ, ಸಕಾಲದಲ್ಲಿ ಹಾಲು ಉತ್ಪಾದಕರಿಗೆ ಬಟವಾಡೆಯ ಪಾವತಿ ಹಾಗೂ ಗ್ರಾಹಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಒಕ್ಕೂಟದ ಆಡಳಿತ ಮಂಡಳಿಯು ದರವನ್ನು ಕಾಲ-ಕಾಲಕ್ಕೆ ಪರಿಷ್ಕರಿಸಿ, ಉತ್ಪಾದಕರು ಉತ್ಪಾದಿಸಿ ಸರಬರಾಜು ಮಾಡಿದ ಗುಣಮಟ್ಟದ ಹಾಲಿಗೆ ಉತ್ತಮ ದರವನ್ನು ನೀಡುತ್ತಾ ಬರುತ್ತಿದೆ.

ಇ-ಪಸಂಮೀ 48 ಸಲೆವಿ 2022

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,